ತಾರೀಖು 10ನೆ ಜೂ॥ 1907.

ನಂ. 11579—ಎಲ್. ಬಿ. 440-06-3, 1894ನೆಯ ವರ್ಷದ 7ನೆಯ ನಂಬರ್ ಲ್ಯಾಂಡ್ ಅಕ್ವಿಸಿಷನ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವುದೇನೆಂದರೆ :—ಇದರಡಿ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಎಂದರೆ ಅಗ್ರಹಾರದ ಗ್ರಾಮನಿವೇಶನವನ್ನು ಬಡಾಯಿಸುವುದಕ್ಕೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 3 (c) ಪ್ರಕರಣಗಳನ್ನನುಸರಿಸಿ ನಂದ್ದಗಿರಿ ಸಬ್ ಡಿವಿಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರಿಗೆ ಸದರಿ ಜಮೀನುಗಳನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ತಾಲ್ಲೂಕು	ಹೋಬಳಿ	ಗ್ರಾಮ	ಖಾತೆದಾರರ ಹೆಸರು	ಸರ್ವೆ ನಂಬರ್	ಹಿಸ್ಸೆ ಅಥವಾ ಖರಾಬಿನ ವಿಸ್ತೀರ್ಣ	ಪೈಕಿ ಬಿಡಿಸಿಕೊಂಡ ವಿಸ್ತೀರ್ಣ	ಈಗ ಸರಕಾರಕ್ಕೆ ಬೇಕಾಗಿರುವ ವಿಸ್ತೀರ್ಣ	ಚತುರ್ಗಡಿ			
								ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
					ಎ. ಗು.	ರೂ. ಆ.	ಎ. ಗು.				
ತುಮಕೂರು ಕೊರ್ಟ್-ಗೆರೆ ಸಬ್ ತಾಲ್ಲೂಕು	ಕೊರ್ಟ್-ಗೆರೆ ಹೋಬಳಿ	ಅಗ್ರಹಾರ	ನರಸಿಂಹ ಬಿನ್ ಹಳೆವ	1—2	0 21	0 8	0 21	ಹಳೆ ಗ್ರಾಮ ನಿವೇಶನ.	ತುಮಕೂರು-ಬಳ್ಳಾರಿ ರಸ್ತೆ	ಚನ್ನಬಸವಣ್ಣನ ಜಮೀನು	ಸಂಜೀವನ ಜಮೀನು
			ನಾಗೇನ ಹಳ್ಳಿ ನಾಗ.	1—3	3 25	4 0	1 3	ಮಾದಿಗರ ಹಟ್ಟಿ.	ನರಸಿಂಹ ಮತ್ತು ಚನ್ನಬಸವ ಣ್ಣನ ಜಮೀನು	ಚನ್ನಬಸವಯ್ಯನ ಜಮೀನು	ರಸ್ತೆ
			ಸಂಜೀವ ಬಿನ್ ಕೂರ್ಲಹನುವ	1—5	1 38	2 4	1 38	ಹಳೆ ಗ್ರಾಮ ನಿವೇಶನ.	ತುಮಕೂರು-ಬಳ್ಳಾರಿ ರಸ್ತೆ	ನರಸಿಂಹನ ಜಮೀನು	ಓಣಿ
			ಚನ್ನಬಸಯ್ಯ ಬಿನ್ ರುದ್ರಯ್ಯ	1—6	0 20	0 8	0 20	ಡಿಟೋ	ಸಂಜೀವನ ಜಮೀನು	ರಸ್ತೆ	ಡಿಟೋ
			ಚನ್ನಬಸಯ್ಯ	13—1	5 1	5 8	1 20	ತುಮಕೂರು-ಬಳ್ಳಾರಿ ರಸ್ತೆ	ಈ ಸರ್ವೆ ನಂಬರಿನ ಭಾಗ	ಈ ಸರ್ವೆ ನಂಬರಿನ ಭಾಗ	ಹನುಮನ ಜಮೀನು

ತಾರೀಖು 15ನೆ ಜೂ॥ 1907.

ನಂ. ಜೆ. 3739—ಕೋರ್ಟ್ಸ್ 225-06—1, ಮಿ॥ ಜಸ್ಟೀಸ್ ಎಸ್. ಮೂರ್ರವರು ಮೃತಪಟ್ಟುದರಿಂದ ಮೈಸೂರು ಚೀಫ್ ಕೋರ್ಟಿನಲ್ಲಿ ಆದ ಖಾಲಿಯನ್ನು ಭರ್ತಿ ಮಾಡುವುದಕ್ಕೆ ಈ ಕೆಳಗಿನ ಹಂಗಾಮಿ ಏರ್ಪಾಡುಗಳು ಮಾಡಲ್ಪಡತಕ್ಕದ್ದೆಂದು ಶ್ರೀಮಂ ಮಹಾರಾಜರವರು ಅಪ್ಪಣೆ ದಯಪಾಲಿಸಿರುತ್ತಾರೆ :—

(1) 1907ನೆ ಮೇ 15ನೆ ತಾರೀಖಿನಿಂದ ಮಿ॥ ಎಸ್. ವಿ. ನಂಜುಂಡಯ್ಯ, ಎಂ. ಎ., ಎಂ. ಎಲ್., ರವರು ಚೀಫ್ ಜಡ್ಜಿಯಾಗಿ ಬದಲಿ ಕೆಲಸ ನೋಡುವುದು.

(2) ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರ್, ಬಿ. ಎ., ಬಿ. ಎಲ್., ರವರು ಚೀಫ್ ಕೋರ್ಟಿನ ಒಬ್ಬ ಜಡ್ಜಿಯಾಗಿ (ಚಾರ್ಜ್ ವಹಿಸಿದ ತಾರೀಖಿನಿಂದ) ಬದಲಿ ಕೆಲಸ ನೋಡುವುದು.

ತಾರೀಖು 15ನೆ ಜೂ॥ 1907.

ನಂ. ಜೆ. 7802—ಜೆ. ಎಂ. 135-06—17, ಇಂಡಿಯಾ ದೇಶದ ಶ್ರೀಮಂ ಮಹಾರಾಜಾ ಚಕ್ರವರ್ತಿಯವರ ವರ್ಷವರ್ಧಂತಿಯ ಬಗ್ಗೆ 1907ನೆ ಇಸವಿಯ ಸರ್ಕಾರಿ ಕ್ಯಾಲೆಂಡರಿನಲ್ಲಿ ಪ್ರಕಟವಾಗಿರುವ 1907ನೇ ಇಸವಿಯ ಜೂ॥ 26ನೆ ತಾರೀಖಿನ ದಿನಕ್ಕೆ ಬದಲಾಗಿ ಇದೇ ತಿಂಗಳ 28ನೆ ತಾರೀಖಿನ ದಿನವು ಮೈಸೂರು ಸಂಸ್ಥಾನದಲ್ಲಿ ಸಾಮಾನ್ಯ ರಜಾ ದಿವಸವಾಗಿರತಕ್ಕದ್ದು.

ತಾರೀಖು 15ನೆ ಜೂ॥ 1907.

ನಂ. ಜೆ. 7855—ಜೆ. ಎಂ. 335-06—1, ಮಿ॥ ಕೆ. ಎಸ್. ಚಂದ್ರಶೇಖರ ಐಯ್ಯರನ್ನು ಮೈಸೂರು ಚೀಫ್ ಕೋರ್ಟಿನಲ್ಲಿ ಕೆಲಸಕ್ಕೆ ನೇಮಿಸಿರುವ ಕಾಲದಲ್ಲಿ, ಸರ್ಕಾರದ ಅಂಡರ್ ಸೆಕ್ರೆಟರಿ ಮಿ॥ ಸಿ. ಎಸ್. ಬಾಲಸುಂದರಂ ಐಯ್ಯರ್, ಬಿ. ಎ., ಯವರನ್ನು ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸೆಕ್ರೆಟರಿಯಾಗಿ ಬದಲಿ ನೋಡಲು ನೇಮಕಮಾಡಿ ಇದೆ.